**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 873 /2025**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಉದಯ

ತಂದೆಯ ಹೆಸರು : ಹೊನ್ನಪ್ಪ ನಾಯ್ಕ

ವಯಸ್ಸು : 47 ವರ್ಷ

ಉದ್ಯೋಗ : ವಕೀಲ

ವಾಸ್ತವ್ಯ : ಮುಂಡಳ್ಳಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/10 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಕಳೆದ 23 ವರ್ಷಗಳಿಂದ ಭಟ್ಕಳ ನ್ಯಾಯಾಲಯದಲಿ ವಕೀಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನನ್ನ ಅಜ್ಜಿ ಮನೆ ಚೌತಣಿಯ ಮಾರುತಿ ಪ್ರಿಂಟಿಂಗ್ ಪ್ರೆಸ್ ನಲ್ಲಿರುತ್ತದೆ. ದಿಃ 02.10.2024 ರಂದು ನ್ಯಾಯಾಲಯದಲ್ಲಿ ಗಾಂಧಿ ಜಯಂತಿ ನಿಮಿತ್ತ ಕಾರ್ಯಕ್ರಮ ಇದ್ದ ಕಾರಣ ಬೆಳಿಗ್ಗೆ 9.25 ಗಂಟೆಗೆ ನಾನು ಮನೆಯಿಂದ ಹೊರಟು 9.30 ಗಂಟೆಗೆ ನಾನು ನನ್ನ ಅಜ್ಜಿ ಮನೆಯ ಬಳಿ ಬಂದಾಗ ಅಲ್ಲಿ ನಮ್ಮ ಮಾವ ಚಾಸಾ 8 ರವರು ತಮ್ಮ ಹಳೆ ಕಟ್ಟಡ ದುರಸ್ತಿ ಕಾರ್ಯ ನೋಡುತ್ತಿರುವಾಗ ನಾನು ಅವರನ್ನು ಮಾತನಾಡಿಸಲು ಬೈಕು ನಿಲ್ಲಿಸಿರುತ್ತೇನೆ. ಆಗ ಒಳಗಿನಿಂದ ಕೂಗುತ್ತಾ ಬಂದ ಒಬ್ಬ ವ್ಯಕ್ತಿ ತನ್ನ ಆಟೋ ನಂಬರ್ ಕೆಎ 47 –1619 ಅದರ ಹಿಂದುಗಡೆಯಲ್ಲಿಟ್ಟ ಆಯುಧವನ್ನು ತೆಗೆದುಕೊಂಡು ನನ್ನ ಮಾವನಿಗೆ ಕೊಲೆ ಮಾಡುವ ಉದ್ದೇಶದಿಂದ ತನ್ನ ಆಟೋ ದಲ್ಲಿ ಇಟ್ಟ ಆಯುಧದಿಂದ ನನ್ನ ಮಾವನ ತಲೆಗೆ ಹೊಡೆದಿರುತ್ತಾರೆ. ಆಗ ನನ್ನ ಮಾವನ ತಲೆಗೆ ರಕ್ತ ಸೋರುತ್ತಿದ್ದು ಆಗ ನಾನು ಕೂಗಿಕೊಂಡಿದ್ದು ಅಕ್ಕಪಕ್ಕದ ಮನೆಯವರಾದ ಶಂಕರ, ಲೋಕೇಶ್ , ಸತೀಶ್ ಹಾಗೂ ಮಾರುತಿ ಮತ್ತು ರಜತ್ ಅವರು ಓಡಿ ಬಂದಿರುತ್ತಾರೆ. ಅವರನ್ನು ನಮ್ಮದೇ ಕಾರಿನಲ್ಲಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದು ಅಲ್ಲಿ ಪೊಲೀಸರು ಗಾಯಾಳುವಿನ ಹೇಳಿಕೆ ಹಾಗೂ ಪೊಟೋ ತೆಗೆದುಕೊಂಡಿರುತ್ತಾರೆ. ಆಸ್ಪತ್ರೆಯಲ್ಲಿ 7 – 8 ಹೊಲಿಗೆಯನ್ನು ಗಾಯಾಳುವಿಗೆ ಹಾಕಿದ್ದು ಇರುತ್ತದೆ. ನಂತರ ಅಲ್ಲಿ ಪ್ರಥಮ ,ಚಿಕಿತ್ಸೆ ನೀಡಿ ನಂತರ ಕುಂದಾಪುರದ ವಿಕ್ರಮ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿ ಕುಂದಾಪುರದ ನ್ಯೂ ಮೆಡಿಕಲ್ ದಲ್ಲಿ ಒಳರೋಗಿಯಾಗಿ ದಾಖಲಿಸಿ ನಂತರ ಅದೇ ದಿನ ಠಾಣೆಗೆ

ದೂರು ನೀಡಲು  ಹೋದಾಗ ಅವರು ಸಂಜೆ 6.00 ಗಂಟೆಗೆ ಬರಲು ಹೇಳಿದ್ದು ಅದೇ ದಿನ ಸಂಜೆ ನಾನು ಲಿಖಿತವಾದ ದೂರನ್ನು ನೀಡಿದ್ದು  ನಂತರ ದಿಃ 03.10.2024 ರಂದು ನನಗೆ ನೊಟೀಸನ್ನು ನೀಡಿ ಅದರಲ್ಲಿ ತಲವಾರನ್ನು ಠಾಣೆಗೆ ನನಗೆ ಹಾಜರುಪಡಿಸಲು ತಿಳಿಸಿರುತ್ತಾರೆ ಹಾಗೂ ಸಾಕ್ಷಿದಾರರ ಹೆಸರನ್ನು ನನಗೆ ನೀಡಲು ಹೇಳಿದ್ದು ನಾನು ತಲವಾರನ್ನು ಠಾಣೆಗೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ಹೆಸರನ್ನು ನೀಡಿರುತ್ತೇನೆ. ದಿಃ 04.10.2024 ರಂದು ಗುನ್ಹಾ ಸ್ಥಳದ ಪಂಚನಾಮೆ ಮಾಡಿದ್ದು ಇರುತ್ತದೆ. ಪಂಚರಾದ ಚಾಸಾ 2 ಮತ್ತು 3 ರ  ಸಮಕ್ಷಮ ಪಂಚನಾಮೆಗೆ ಗುನ್ಹಾ ಸ್ಥಳ ನಾನೇ ತೋರಿಸಿರುತ್ತೇನೆ. ಅಲ್ಲಿ ಪೊಟೋ ಹಾಗೂ ವಿಡಿಯೋ ಚಿತ್ರೀಕರಣ ಮಾಡಿರುತ್ತಾರೆ.  ಸದರಿ ಸ್ಥಳದ ಪಂಚನಾಮೆ ನಂತರ ನಾನು ಠಾಣೆಗೆ ಹೋಗಿದ್ದು ಇರುವುದಿಲ್ಲ ಹಾಗೂ ಮರುಹೇಳಿಕೆಯನ್ನು ನೀಡಿದ್ದು ಇರುವುದಿಲ್ಲ. ನಂತರ ನನಗೆ ತಿಳಿದುಬಂದ ಮಾಹಿತಿಯಂತೆ ಸದರಿ ಪ್ರಕರಣದ ತನಿಖಾಧಿಕಾರಿಯು ನನ್ನ ಸುಳ್ಳು ಮರು ಹೇಳಿಕೆ ಸೃಷ್ಟಿಸಿ ಮಾನ್ಯ ಸೇಶನ್ ನ್ಯಾಯಾಲಯದಿಂದ ವಿಚಾರಣೆಯಾಗುವ ಪ್ರಕರಣವನ್ನು ಈ ನ್ಯಾಯಲಯದಲ್ಲಿ ವಿಚಾರಣೆಯಾಗವಂತೆ ಮರುಹೇಳಿಕೆ ಸೃಷ್ಟಿಸಿರುತ್ತಾರೆ. ಸದರಿ ಪ್ರಕರಣದ ಆರೋಪಿ ಗಾಯಾಳುವನ್ನು ಕೊಲೆ ಮಾಡುವ ಉದ್ದೇಶಕ್ಕೆ ಉದ್ದೇಶ ಪೂರ್ವಕವಾಗಿ ತನ್ನ ಆಟೋದಲ್ಲಿಟ್ಟ ತಲವಾರಿನಿಂದ ಹಲ್ಲೆ ಮಾಡಿದ್ದು ಇರುತ್ತದೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಘಟನೆಯು ಅಂದಾಜು ಬೆಳಿಗ್ಗೆ 9.30 ಗಂಟೆ ಸುಮಾರಿಗೆ ಆಗಿರುತ್ತದೆ. ಸದರಿ ರಕ್ತದ ಕಲೆಗಳು ಗಾಯಾಳುವಿನ ಟೀ ಶರ್ಟ ಹಾಗೂ ಪ್ಯಾಂಟೀನ ಮೇಲೆ ಬಿದ್ದಿರುತ್ತವೆ.

2. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-  1 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು  ಗುರುತಿಸಲಾಯಿತು. ಸಾಕ್ಷಿಯು  ಗುನ್ಹಾ ಸ್ಥಳದ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ- 3 ಎಂದು ಗುರುತಿಸಲಾಯಿತು. ಸಾಕ್ಷಿ ಬಟ್ಟೆ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು -1 ಎಂದು ಗುರುತಿಸಲಾಯಿತು.

(**ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ/ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ  ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**)

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 18.10.2024 ರಂದು ಆರೋಪಿ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುವುದಿಲ್ಲವೆಂದು ಮರುಹೇಳಿಕೆ ನೀಡಿದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಹಲ್ಲೆಗೆ ಉಪಯೋಗಿಸಿದ ಆಯುಧ ಇಂದು ನ್ಯಾಯಾಲಯದ ಮಂದೆ ಇದ್ದ ಆಯುಧ ಅದೇ ಆಗಿದ್ದರು ಸಹ ಸೃಷ್ಟಿ ಮಾಡಿದ ಆಯುಧ ಆಗಿದ್ದು ಹಲ್ಲೆಗೆ

ಉಪಯೋಗಿಸಿದ ಆಯುಧ ಬೇರೆ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಪ್ ಜಿ ವಕೀಲರಿಂದ,</u>**

ನಾನು ಕಳೆದ 23 ವರ್ಷಗಳಿಂದ ವಕೀಲ ವೃತ್ತಿ ಮಾಡುತ್ತಿದ್ದೇನೆ. ನ್ಯಾಯಾಲಯದಲ್ಲಿ ಪ್ರತಿವರ್ಷ ಗಾಂಧಿ ಜಯಂತಿ ಆಚರಣೆ ಮಾಡುವುದಿಲ್ಲ ಎಂದರೆ 2024 ರಲ್ಲಿ ಗಾಂಧಿ ಜಯಂತಿಯನ್ನು ಆಚರಣೆ ಮಾಡಲಾಗಿತ್ತು ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಗಾಯಳುವನ್ನು ಭಟ್ಕಳದ ಸರಕಾರಿ ಆಸ್ಪತ್ರೆಗೆ ತಂದಾಗ ಪೊಲೀಸರು ಆಸ್ಪತ್ರೆಗೆ ಬಂದು ಗಾಯಾಳುವಿನಿಂದ ಹೇಳಿಕೆಯನ್ನು ಪಡೆದಿರುತ್ತಾರೆ ಆದರೆ ಅದನ್ನು ದೂರು ಎಂದು ಪರಿಗಣಿಸಿಲ್ಲ. ಗಂಭೀರವಾದ ಗಾಯವಾದರೂ ಸಹ ಪೊಲೀಸರು ಹೇಳಿಕೆಯನ್ನುದೂರು ಎಂದು ಪರಿಗಣಿಸದೇ ಆರೋಪಿಗೆ ಸಹಾಯ ಮಾಡಿದ್ದಾರೆ. ಆ ತಕ್ಷಣ ನಾನು ದೂರನ್ನು ನೀಡಿಲ್ಲ ಕಾರಣ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಸಂಜೆ ದೂರನ್ನು ನೀಡಿದ್ದು ಇರುತ್ತದೆ. ಆರೋಪಿಗೆ ಅನುಕೂಲವಾಗಲು ಸುಳ್ಳು ಅಂತಿಮ ವರದಿ ಪೊಲೀಸರು ಸಲ್ಲಿಸಿರುತ್ತಾರೆ. ಘಟನೆಯಾದ ಮಾರನೇ ದಿನ ನಾನು ತಲವಾರನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ತಲವಾರನ್ನು ಠಾಣೆಗೆ ಹಾಜರುಪಡಿಸಲು ನನಗೆ ನೊಟೀಸು ನೀಡಿದ್ದರು ಸದರಿ ನೊಟೀಸಿಗೆ ನಾನು ಉತ್ತರ ನೀಡಿಲ್ಲ. ಗಾಯಾಳು ಕುಂದಾಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೊಲೀಸರು ಯಾವತ್ತೂ ಬಂದು ಗಾಯಾಳುವನ್ನು ವಿಚಾರಿಸಿಲ್ಲ ಹಾಗೂ ಆಸ್ಪತ್ರೆಯ ದಾಖಲೆಯನ್ನು ಪೊಲೀಸರು ಪಡೆದಿಲ್ಲ. ಗಾಯಾಳುವಿನ ಆಸ್ಪತ್ರೆಯ ದಾಖಲೆಗಳನ್ನು ಠಾಣೆಗೆ ನಾನು ನೀಡಲು ಹೋದರೆ ಪೊಲೀಸರು ಅವುಗಳನ್ನು ನನಗೆ ಮರಳಿ ನೀಡಿರುತ್ತಾರೆ. ಗಾಯಾಳುವಿನ ರಕ್ತದ ಮಾಧರಿಯನ್ನು ತೆಗೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಗುನ್ನಾ ಸ್ಥಳದಲ್ಲಿ ರಕ್ತದ ಕಲೆಗಳು ಇರಲಿಲ್ಲ ಬಟ್ಟೆಯ ಮೇಲೆ ಇದ್ದವು. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿಲ್ಲ. ಆರೋಪಿ ಹಾಗೂ ಗಾಯಾಳುವಿನ ಮನೆಗಳು ಹೊಂದಿಕೊಂಡು ಇವೆ. ಆರೋಪಿ ಹಾಗೂ ಗಾಯಾಳವಿನ ಮನೆಯ ಮಧ್ಯ ಇರುವ ಗೋಡೆಯ ಛಾವಣಿ ತೆಗೆದ ಕಾರಣ ಅವರ ನಡುವೆ ವ್ಯಾಜ್ಯ ಇತ್ತು. ಎಂದರೆ ಅವರನ್ನು ವಿಚಾರಿಸಿ ಛಾವಣಿ ತೆಗೆಯಲಾಗಿತ್ತು ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ಅರೋಪಿಯು ಕಾನೂನು ಬಾಹಿರವಾಗಿ ಕಟ್ಟಡ ಕಟ್ಟುತ್ತಿದ್ದಾರೆಂದು ಪುರಸಭೆಗೆ ದೂರನ್ನು ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಸಿಟ್ಟಿನಿಂದ ನನ್ನನ್ನು ಉಪಯೋಗಿಸಿ ಚಾಸಾ 8 ರವರು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 02.10.2024 ರಂದು ಆರೋಪಿಯು ಚಾಸಾ 8 ರವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 8 ಇವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ..